## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1579(1855) |
| ಮಾನ್ಯ ಸದಸ್ಯರ ಹೆಸರು: | ಶ್ರೀ ಮಂಜುನಾಥ ಭಂಡಾರಿ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | 23.03.2026 |
| ಉತ್ತರಿಸುವ ಸಚಿವರು: | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

*******

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡು ಬರುವ ಪ್ರಮುಖ ಆರೋಗ್ಯ ಸಮಸ್ಯೆಗಳು ಯಾವುವು? ಅವುಗಳನ್ನು ಗುರುತಿಸಲು, ಚಿಕಿತ್ಸೆಯನ್ನು ಒದಗಿಸಲು ಹಾಗೂ ಹಿಂಬಾಲಿಕಾ (Follow-up) ಕ್ರಮಗಳನ್ನು ಅನುಸರಿಸಲು ಕೈಗೊಂಡಿರುವ ಕಾರ್ಯಕ್ರಮಗಳು ಯಾವುವು? | ರಾಜ್ಯದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುವ ಪ್ರಮುಖ ಆರೋಗ್ಯ ಸಮಸ್ಯೆಗಳು ಅಸಾಂಕ್ರಾಮಿಕ ರೋಗಗಳಿಗೆ ಸಂಬಂಧಿಸಿದ್ದು ಅವುಗಳಲ್ಲಿ ಪ್ರಮುಖವಾಗಿ ಮಧುಮೇಹ, ಅಧಿಕ ರಕ್ತದೊತ್ತಡ, ಬಾಯಿ ಕ್ಯಾನ್ಸರ್, ಸ್ತನ ಕ್ಯಾನ್ಸರ್ ಮತ್ತು ಗರ್ಭಕಂಠದ ಕ್ಯಾನ್ಸರ್‌ಗಳನ್ನು ಒಳಗೊಂಡಂತೆ ಕಿಡ್ನಿ ವೈಫಲ್ಯ, ಲಿವರ್ ಸಂಬಂಧಿ ಕಾಯಿಲೆಗಳು, ಮಾನಸಿಕ ಆರೋಗ್ಯ, ನಿದ್ರಾ ಹೀನತೆ, ದೀರ್ಘಕಾಲದ ಪ್ರತಿರೋಧಕ_ಶ್ವಾಸಕೋಶದ ಕಾಯಿಲೆ, ಡಯಾಬಿಟಿಕ್ ರೆಟಿನೋಪತಿ, ಡಯಾಬಿಟಿಕ್ ಫುಟ್ ಮತ್ತು ನರರೋಗಕ್ಕೆ ಸಂಬಂಧಿಸಿದ ಸಮಸ್ಯೆಗಳು ಹೆಚ್ಚಾಗಿ ಕಂಡುಬರುತ್ತಿವೆ.<br><br>ಸದರಿ ಕಾರ್ಯಕ್ರಮಗಳನ್ನು ಶೀಘ್ರವಾಗಿ ಪತ್ತೆಹಚ್ಚಲು ಗೃಹ ಆರೋಗ್ಯ ಯೋಜನೆಯನ್ನು ಜೂನ್-2025 ರಿಂದ ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಗಿದೆ.<br><br>ರಾಷ್ಟ್ರೀಯ ಆರೋಗ್ಯ ಅಭಿಯಾನದ ಸಾರ್ವತ್ರಿಕ ಆರೋಗ್ಯ ರಕ್ಷಣೆ ಕಾರ್ಯಕ್ರಮದಡಿಯಲ್ಲಿ ಗ್ರಾಮೀಣ ಪ್ರದೇಶದ ಜನರಿಗೆ ಉತ್ತಮ ಆರೋಗ್ಯ ಸೇವೆ ನೀಡುವ ಹಿತದೃಷ್ಟಿಯಿಂದ 7045 ಉಪಕೇಂದ್ರಗಳಲ್ಲಿ 6532 ಆಯುಷ್ಮಾನ್ ಆರೋಗ್ಯ ಕೇಂದ್ರಗಳಿಗೆ ಸಮುದಾಯ ಆರೋಗ್ಯ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಉಪಕೇಂದ್ರ - ಆಯುಷ್ಮಾನ್ ಆರೋಗ್ಯ ಕೇಂದ್ರಗಳಲ್ಲಿ 73 ಅವಶ್ಯಕ ಔಷಧಿ ಮತ್ತು 14 ರೋಗ ನಿರ್ಣಯದ ಪರೀಕ್ಷೆಗಳಿಗೆ (Diagnostics) ಅವಕಾಶ ಕಲ್ಪಿಸಲಾಗಿದೆ. |
| ಆ) | ಗ್ರಾಮೀಣ ಪ್ರದೇಶಗಳಲ್ಲಿ ರೋಗ ಪತ್ತೆ ಮತ್ತು ರೋಗ ನಿರ್ಣಯಕ್ಕಾಗಿ ಆರೋಗ್ಯ ಇಲಾಖೆಯ ಮತ್ತು ಇತರ ಇಲಾಖೆಗಳ ಪೂರಕ ಯಾವ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ? ಜನಸಂಖ್ಯೆಗೆ | ಗ್ರಾಮೀಣ ಪ್ರದೇಶಗಳಲ್ಲಿ ರೋಗ ಪತ್ತೆ ಮತ್ತು ರೋಗ ನಿರ್ಣಯಕ್ಕಾಗಿ ಆರೋಗ್ಯ ಇಲಾಖೆಯು ಪ್ರಯೋಗಶಾಲಾ ತಂತ್ರಜ್ಞರನ್ನು ನಿಯೋಜಿಸಿದೆ. ಜನಸಂಖ್ಯೆಗೆ ಅನುಗುಣವಾಗಿ ಈ ಸಿಬ್ಬಂದಿಗಳ ಸಂಖ್ಯೆಯು ಸಮರ್ಪಕವಾಗಿರುತ್ತದೆ. |

<table>
<tr>
<td></td>
<td>ಅನುಗುಣವಾಗಿ ಈ ಸಿಬ್ಬಂದಿಗಳ ಸಂಖ್ಯೆ ಸಮರ್ಪಕವಾಗಿದೆಯೇ? ಪ್ರಸ್ತುತ ಜನಸಂಖ್ಯೆ ಸಿಬ್ಬಂದಿ ಪ್ರಮಾಣವೆಷ್ಟು? ಖಾಲಿ ಹುದ್ದೆಗಳ ವಿವರವೇನು?</td>
<td>ಪ್ರಯೋಗ ಶಾಲಾ ತಂತ್ರಜ್ಞರ ಖಾಲಿ ಹುದ್ದೆಗಳ ಮಾಹಿತಿಯನ್ನು ಅನುಬಂಧ-ದಲ್ಲಿ ನೀಡಲಾಗಿದೆ.<br><br>ಸಾರ್ವತ್ರಿಕ ಆರೋಗ್ಯ ರಕ್ಷಣೆ ಕಾರ್ಯಕ್ರಮದಡಿಯಲ್ಲಿ ಉಪಕೇಂದ್ರ-ಆಯುಷ್ಮಾನ್ ಆರೋಗ್ಯ ಕೇಂದ್ರಗಳಿಗೆ ಸಮುದಾಯ ಆರೋಗ್ಯ ಅಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಂಡಿದ್ದು, ವಿವರ ಈ ಕೆಳಕಂಡಂತಿದೆ.
<table>
<tr><th>ಅನುಮೋದನೆ ಗೊಂಡ ಸಮುದಾಯ ಆರೋಗ್ಯ ಅಧಿಕಾರಿಗಳ ಸಂಖ್ಯೆ</th><th>ಕರ್ತವ್ಯ ನಿರತ ಸಮುದಾಯ ಆರೋಗ್ಯ ಅಧಿಕಾರಿಗಳ ಸಂಖ್ಯೆ (12.03.2026 ರನ್ವಯ)</th><th>ಖಾಲಿ ಹುದ್ದೆಗಳ ಸಂಖ್ಯೆ</th></tr>
<tr><td>7045</td><td>5330</td><td>1715</td></tr>
</table>
</td>
</tr>
<tr>
<td>ಇ)</td>
<td>ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ವರದಿಯಾಗುತ್ತಿರುವ ಸಾಮಾನ್ಯ ಹಾಗೂ ಮಾರಣಾಂತಿಕ ಕಾಯಿಲೆಗಳು ಎಷ್ಟು ಮತ್ತು ಯಾವುವು? ಅವುಗಳ ಗುರುತಿಸುವಿಕೆ ಹಾಗೂ ನಿಯಂತ್ರಣಕ್ಕೆ ಅನುಸರಿಸಲಾಗುತ್ತಿರುವ ಕ್ರಮಗಳೇನು?</td>
<td>ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ವರದಿಯಾಗುತ್ತಿರುವ ಸಾಮಾನ್ಯ ಹಾಗೂ ಮಾರಣಾಂತಿಕ ಕಾಯಿಲೆಗಳ ಸಂಖ್ಯೆ 05 ಮತ್ತು ಅಸಾಂಕ್ರಾಮಿಕ ರೋಗಗಳ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಮಧುಮೇಹ, ಅಧಿಕ ರಕ್ತದೊತ್ತಡ, ಕ್ಯಾನ್ಸರ್, ಪಾರ್ಶ್ವವಾಯು ಇವುಗಳನ್ನು ಗುರುತಿಸುವಿಕೆ ಹಾಗೂ ನಿಯಂತ್ರಣಕ್ಕಾಗಿ ಗೃಹ ಆರೋಗ್ಯ ಯೋಜನೆಯನ್ನು ಅನುಷ್ಠಾಗೊಳಿಸಲಾಗಿರುತ್ತದೆ, ಇದರೊಂದಿಗೆ ಆರೋಗ್ಯ ಶಿಬಿರಗಳನ್ನು ಏರ್ಪಡಿಸುವುದರ ಮೂಲಕ ಸಾರ್ವಜನಿಕರಿಗೆ ಅರಿವು, ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆಯನ್ನು ಒದಗಿಸಲಾಗುತ್ತಿದೆ.</td>
</tr>
<tr>
<td>ಈ)</td>
<td>ಡಯಾಬಿಟಿಸ್, ರಕ್ತದೊತ್ತಡ, ಪಾರ್ಶ್ವವಾಯು, ಕ್ಷಯರೋಗ (TB), ನಪುಂಸಕತೆ, ಅಸ್ತಮಾ ಎಂಡೋಸಲ್ಫಾನ್ ಪೀಡಿತ, ಈ ರೋಗಗಳ ಪತ್ತೆ ಮತ್ತು ಚಿಕಿತ್ಸೆಯಲ್ಲಿ ತೊಡಗಿರುವ ಆರೋಗ್ಯ ಸೇವಾ ಸಿಬ್ಬಂದಿಗಳಿಗೆ ಪೂರಕ ಪ್ರೋತ್ಸಾಹಧನವನ್ನು ಮತ್ತು ರೋಗಿಗಳಿಗೆ ಔಷಧಿ. ಪೌಷ್ಟಿಕ ಆಹಾರ ಮತ್ತು ಸಹಾಯಧನವನ್ನು ಸಮಯಕ್ಕೆ ನೀಡಲಾಗುತ್ತಿದೆಯೇ: ಇಲ್ಲದಿದ್ದರೆ ಕಾರಣವೇನು: ಯಾವಾಗ ನೀಡಲು</td>
<td>ಸಾರ್ವತ್ರಿಕ ಆರೋಗ್ಯ ರಕ್ಷಣೆ ಕಾರ್ಯಕ್ರಮದಡಿಯಲ್ಲಿ ಆಯುಷ್ಮಾನ್ ಆರೋಗ್ಯ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ 15 ಸೂಚ್ಯಾಂಕಗಳಲ್ಲಿ ಸಾಧಿಸಿದ ಕಾರ್ಯಕ್ಷಮತೆಯ ಆಧಾರ ಮೇಲೆ ಸಿಬ್ಬಂದಿಗಳಿಗೆ ಪ್ರತಿ ಮಾಹೆ ಗರಿಷ್ಠ ಈ ಕೆಳಕಂಡಂತೆ ಪ್ರೋತ್ಸಾಹ ಧನ ಮತ್ತು ತಂಡ ಆಧಾರಿತ ಪ್ರೋತ್ಸಾಹ ಧನ ನೀಡಲಾಗುತ್ತಿದೆ.<br><br>• ಪ್ರೋತ್ಸಾಹ ಧನ – ರೂ. 8000/-<br>• ಸಮುದಾಯ ಆರೋಗ್ಯ ಅಧಿಕಾರಿಗಳಿಗೆ–ರೂ. 8000/-</td>
</tr>
</table>

| | | |
|---|---|---|
| | ಕ್ರಮವಹಿಸಲಾಗುವುದು: | • ತಂಡ ಆಧಾರಿತ ಪ್ರೋತ್ಸಾಹ ಧನ- ರೂ. 8000/-<br>• ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿಗಳಿಗೆ – ರೂ. 1500/-<br>• ಆರೋಗ್ಯ ನಿರೀಕ್ಷಣಾಧಿಕಾರಿಗಳಿಗೆ – ರೂ. 1500/-<br>• ಆಶಾ ತಂಡಕ್ಕೆ – ರೂ. 5000/-<br>ಈ ಮೇಲ್ಕಂಡ ಪ್ರೋತ್ಸಾಹ ಧನವನ್ನು ಸಾರ್ವತ್ರಿಕ ಆರೋಗ್ಯ ರಕ್ಷಣೆ ಕಾರ್ಯಕ್ರಮದಡಿಯಲ್ಲಿ ನೀಡಲಾಗುತ್ತಿದೆ.<br><br>ಎಂಡೋಸಲ್ಫಾನ್ ಸಂತ್ರಸ್ತರನ್ನು ನಿಗದಿತ ದಿನದಂದು ನಡೆಯುವ ತಜ್ಞ ವೈದ್ಯರ ಶಿಬಿರದಲ್ಲಿ ಎಂಡೋಸಲ್ಫಾನ್ ಸಂತ್ರಸ್ತರನ್ನು ಗುರುತಿಸಲಾಗುತ್ತದೆ. ಗುರುತಿಸಿದ ಎಂಡೋ ಸಂತ್ರಸ್ತರಿಗೆ ಗುರುತಿನ ಚೀಟಿ ನೀಡಲಾಗುತ್ತಿದೆ. ಅರ್ಹ ಫಲಾನುಭವಿಗಳಿಗೆ ಅಂಗವಿಕಲತೆ ಆಧಾರದ ಮೇಲೆ ಮಾಸಾಶನವನ್ನು ಕಂದಾಯ ಇಲಾಖೆ ವ್ಯಾಪ್ತಿಗೆ ಬರುವ ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯದಿಂದ ಮಾಸಿಕ ಮಿತವೇತನ ಪಾವತಿಸಲಾಗುತ್ತಿದೆ.<br><br>ಎಂಡೋಸಲ್ಫಾನ್ ಸಂತ್ರಸ್ತರಿಗೆ ಉಚಿತ ವೈದ್ಯಕೀಯ ಸೌಲಭ್ಯವನ್ನು ನೀಡುವ ನಿಟ್ಟಿನಲ್ಲಿ ಖಾಸಗಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳೊಂದಿಗೆ ಶುಲ್ಕ ರಹಿತ ಚಿಕಿತ್ಸೆಗಾಗಿ ಒಡಂಬಡಿಕೆ ಮಾಡಿಕೊಂಡು ವೈದ್ಯಕೀಯ ಸೇವೆಯನ್ನು ನೀಡಲಾಗುತ್ತಿದೆ. ಎಂಡೋಸಲ್ಫಾನ್ ಸಂತ್ರಸ್ತರಿಗಾಗಿ ಪಾಲನಾ ಕೇಂದ್ರ ಹಾಗೂ ಕೌಶಲ್ಯ ತರಬೇತಿ ಕೇಂದ್ರಗಳನ್ನು ನಿರ್ವಹಿಸಲಾಗುತ್ತಿದ್ದು, ಈ ಕೇಂದ್ರಗಳಲ್ಲಿ ಉಚಿತ ಆಹಾರ, ಅಕ್ಷರಭ್ಯಾಸ, ಫಿಯೋಥೆರಪಿ ಸೇವೆ. ಕ್ರೀಡೆ, ಪ್ರಾರ್ಥನೆ, ಯೋಗ, ವ್ಯಾಯಾಮ, ಸ್ಪೀಚ್ಥೆರಪಿ, ಆಪ್ತ ಸಮಾಲೋಚನೆ, ಕೌಶಲ್ಯ ತರಬೇತಿ, ದೈನಂದಿನ ಚಟುವಟಿಕೆಗಳ ತರಬೇತಿ ಸೇವೆಗಳನ್ನು ನೀಡಲಾಗುತ್ತಿದೆ. |
| ಉ) | ಗ್ರಾಮೀಣ ಭಾಗದಲ್ಲಿ ಹಲವಾರು ರೋಗಗಳಿಗೆ ಚಿಕಿತ್ಸೆಯನ್ನು ಒದಗಿಸಲು ಹಾಗೂ ಹಿಂಬಾಲಿಕಾ ಕ್ರಮ ಜರುಗಿಸಲು ಸಹಾಯಕವಾಗುತ್ತಿದ್ದ ಆಸ್ಪತ್ರೆಗಳ ಮುಕ್ತ ನಿಧಿ (Untied Fund) ಬಿಡುಗಡೆಗೆ ತಾಂತ್ರಿಕ ಅಡಚಣೆಗಳಿವೆಯೇ? ಎಷ್ಟು ಅವಧಿಯಿಂದ ಈ ನಿಧಿ ಬಿಡುಗಡೆಗೆ ಬಾಕಿಯಿದೆ; ಅದಕ್ಕೆ ಕಾರಣಗಳೇನು; ಈ ಕುರಿತು ಸರ್ಕಾರ ಕೈಗೊಂಡಿರುವ | ಮುಕ್ತ ನಿಧಿ (Untied Fund) ಅನುದಾನ ಬಿಡುಗಡೆ ಮಾಡಲು ಯಾವುದೇ ತಾಂತ್ರಿಕ ಅಡಚಣೆಗಳು ಇರುವುದಿಲ್ಲ.<br><br>ಗ್ರಾಮೀಣ ಭಾಗದಲ್ಲಿ ಹಲವಾರು ರೋಗಗಳಿಗೆ ಚಿಕಿತ್ಸೆಯನ್ನು ಒದಗಿಸಲು ರಾಷ್ಟ್ರೀಯ ಆರೋಗ್ಯ ಅಭಿಯಾನದ ಅಡಿಯಲ್ಲಿ 2025-26ನೇ ಸಾಲಿನಲ್ಲಿ ಒಟ್ಟು ರೂ. 7935.50 ಲಕ್ಷಗಳ ಅನುದಾನ ಅನುಮೋದನೆಯಾಗಿರುತ್ತದೆ. ಸದರಿ |

| | | |
|---|---|---|
| | ಸುಧಾರಣಾ ಕ್ರಮಗಳೇನು? | ಅನುದಾನದಲ್ಲಿ ಮೊದಲನೇ ತ್ರೈ-ಮಾಸಿಕ ರೂ. 2101.94 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ರೂ. 2101.94 ಲಕ್ಷಗಳ ಅನುದಾನ ಪೂರ್ಣವಾಗಿ ವೆಚ್ಚವಾಗಿರುತ್ತದೆ. |

ಆಕುಕ 48 ಎಸ್‌ಬಿವಿ 2026

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ವಿಧಾನ ಸಭೆ ಪ್ರಶ್ನೆ ಸಂಖ್ಯೆ. ಅನುಬಂಧ-02

| ಹಿರಿಯ ವೈದ್ಯಕೀಯ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ ಹುದ್ದೆಯ ಮಂಜೂರು/ಕಾರ್ಯನಿರತ/ಖಾಲಿ ಹುದ್ದೆಗಳ ಜಿಲ್ಲಾವಾರು ವಿವರ | | | | |
|---|---|---|---|---|
| ಕ್ರ.ಸಂ | ಜಿಲ್ಲೆ | ಮಂಜೂರು | ಕಾರ್ಯನಿರತ | ಖಾಲಿ |
| | **ಬೆಂಗಳೂರು ವಿಭಾಗ** | | | |
| 1 | ಬೆಂಗಳೂರು ನಗರ | 98 | 92 | 6 |
| 2 | ಬೆಂಗಳೂರು ಗ್ರಾಮಾಂತರ | 41 | 38 | 3 |
| 3 | ರಾಮನಗರ | 55 | 49 | 6 |
| 4 | ಚಿತ್ರದುರ್ಗ | 75 | 73 | 2 |
| 5 | ದಾವಣಗೆರೆ | 74 | 72 | 2 |
| 6 | ಕೋಲಾರ | 67 | 47 | 20 |
| 7 | ಚಿಕ್ಕಬಳ್ಳಾಪುರ | 75 | 33 | 42 |
| 8 | ಶಿವಮೊಗ್ಗ | 96 | 63 | 33 |
| 9 | ತುಮಕೂರು | 130 | 85 | 45 |
| | **ಮೈಸೂರು ವಿಭಾಗ** | | | |
| 10 | ಮೈಸೂರು | 122 | 80 | 42 |
| 11 | ಮಂಡ್ಯ | 95 | 51 | 44 |
| 12 | ಹಾಸನ | 118 | 82 | 36 |
| 13 | ಕೊಡಗು | 35 | 11 | 24 |
| 14 | ಚಿಕ್ಕಮಗಳೂರು | 70 | 45 | 25 |
| 15 | ಉಡುಪಿ | 69 | 60 | 9 |
| 16 | ದಕ್ಷಿಣ ಕನ್ನಡ | 82 | 50 | 32 |
| 17 | ಚಾಮರಾಜನಗರ | 71 | 20 | 51 |
| | **ಬೆಳಗಾವಿ ವಿಭಾಗ** | | | |
| 18 | ಬೆಳಗಾವಿ | 158 | 127 | 31 |
| 19 | ಧಾರವಾಡ | 35 | 33 | 2 |
| 20 | ಗದಗ | 47 | 37 | 10 |
| 21 | ಹಾವೇರಿ | 75 | 42 | 33 |
| 22 | ವಿಜಯಪುರ | 91 | 78 | 13 |
| 23 | ಉತ್ತರ ಕನ್ನಡ | 85 | 35 | 50 |
| 24 | ಬಾಗಲಕೋಟೆ | 79 | 74 | 5 |
| | **ಕಲಬುರಗಿ ವಿಭಾಗ** | | | |
| 1 | ಕಲಬುರಗಿ | 120 | 96 | 24 |
| 2 | ಯಾದಗಿರಿ | 60 | 34 | 26 |
| 3 | ಬಳ್ಳಾರಿ | 50 | 35 | 15 |
| 4 | ವಿಜಯನಗರ | 65 | 40 | 25 |
| 5 | ಕೊಪ್ಪಳ | 55 | 35 | 20 |
| 6 | ರಾಯಚೂರು | 67 | 32 | 35 |
| 7 | ಬೀದರ್ | 71 | 63 | 8 |

| | | | |
|---|---|---|---|
| **ಒಟ್ಟು** | **2431** | **1712** | **719** |

16-03-2026

ಆಡಳಿತಾಧಿಕಾರಿಗಳು (ಕು.ಕ),
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,
ಬೆಂಗಳೂರು.



File No. HFW-SBV/48/2026-US-HLTH1-HEALTH AND FAMILY WELFARE SEC (Computer No. 2102221)
Generated from eOffice by SHIVALEELA G S, HFW-HL2-SO(SGS), SECTION OFFICER, HEALTH AND FAMILY WELFARE SEC on 24/03/2026 01:53 PM